ಪೇಶೆಂಟ್‌ಗಳ ಕಡೆಯವರು ಕೂಗಾಡಿದ್ದರು. ಅವರ ಕಡೆ ಎಂಎಲ್‌ಎ ಕೂಡ ಬಂದು ಎಗರಾಡಿದ್ದ. ಅವ ಷರೀಫರ ಕಪಾಳಕ್ಕೆ ಹೊಡೆಯಲು ಹೋದಾಗ, ಅದನ್ನು ತಪ್ಪಿಸಲು ಅಡ್ಡ ಬಂದ ರಾಘವನ್ ಬೆನ್ನ ಮೇಲೆ ಆ ಏಟು ಬಿದ್ದಿತ್ತು. ಅಲ್ಲಿದ್ದ ಪೊಲೀಸರು ಷರೀಫರನ್ನು ಮತ್ತು ರಾಘವನ್‌ರನ್ನು ಅಲ್ಲಿಂದ ಹೊರತಂದು ಆಸ್ಪತ್ರೆಯ ಇನ್ನೊಂದು ತುದಿಯಲ್ಲಿದ್ದ ಕ್ವಾಟ್ರರ್ಸ್‌ನಲ್ಲಿ ಬಿಟ್ಟು ಹೋಗಿದ್ದರು. ಷರೀಫರು ಬೇಸರದಲ್ಲಿದ್ದರೂ ಶಿಷ್ಯನಿಗೆ ಕಲಿಸುವುದನ್ನು ಮರೆತಿರಲಿಲ್ಲ. ಕೈಯಲ್ಲಿದ್ದ ಸಿಗರೇಟು ಮುಗಿಸಿದ ಕೂಡಲೆ, "ಏ ರಾಘು ಹೇಗಿದ್ದಾಳಪ್ಪ... ನಿನ್ನ ಲೇಡಿ ಲವ್ವೂ?" ಎಂದು ಕಣ್ಣು ಹೊಡೆದರು. ಮೊದಲೇ ಸಿಗರೇಟು ಅನುಭವದಿಂದ ಕಕ್ಕಾಬಿಕ್ಕಿಯಾಗಿದ್ದ ರಾಘವನಿಗೆ ಈ ಮಾತು ಕೇಳಿ ಮತ್ತಷ್ಟು ಗಲಿಬಿಲಿಯಾಗಿತ್ತು. "ಓ... ಮಾಲಾನ... ಚೆನ್ನಾಗಿದ್ದಾಳೆ. ಬರೋ ಜೂನ್‌ಗೆ ಮದುವೆ" ಅಂದಿದ್ದ. "ಗುಡ್. ಬೀ ಕೇರ್ ಫುಲ್. ಎಲ್ಲಾ ಫಿಕ್ಸ್ ಆಯಿತು ಅಂತ ಸುಮ್ಮನೆ ಶೂಟ್ ಮಾಡಿ, ಮದುವೆಯಾದ ಮೂರು ತಿಂಗಳಿಗೆ ತಂದೆಯಾಗೋ ಸ್ಥಿತಿಗೆ ಬೀಳಬೇಡಪ್ಪ! ಜೋಪಾನ" ಎನ್ನುತ್ತಾ ಸ್ನಾನ ಮಾಡುವುದಾಗಿ ಮನೆಯ ಒಳಗೆ ಷರೀಫರು ಹೋದ ಮೇಲೆ, ರಾಘವನ್ ವರಂಡಾದಲ್ಲಿದ್ದ ಕುರ್ಚಿಯಲ್ಲಿ ಕುಳಿತರು. ಸಿಗರೇಟಿನ ಅಮಲಿಗೆ ತಲೆ ಗಿರ್ ಅಂದಿತ್ತು. ಹಾಗೇ ಕಣ್ಮುಚ್ಚಿ ಕುರ್ಚಿಗೆ ಒರಗಿ ಬಿಟ್ಟಿದ್ದರು.

"ಏ... ರಾಘು, ಟೀ ತಗೋ ಮಾರಾಯ..." ಎಲ್ಲೋ ದೂರದಲ್ಲಿ ಷರೀಫರ ಧ್ವನಿ ಕೇಳಿದಂತಾಗಿ ಕಣ್ಣು ಬಿಟ್ಟ ರಾಘವನ್‌ಗೆ ಎದುರಿಗೆ ಕುಳಿತಿದ್ದ ಷರೀಫರು ಕಂಡರು. ತಾನು ಇನ್ನೂ ಅವರ ಮನೆಯ ವರಂಡಾದಲ್ಲೇ ಇರುವುದು ಅರಿವಾಗಲು ಸ್ವಲ್ಪ ಸಮಯ ಹಿಡಿದಿತ್ತು. ಟೀಪಾಯ್ ಮೇಲೆ ಎರಡು ಟೀ ತುಂಬಿದ ಲೋಟಗಳಿದ್ದವು. ಎದ್ದು ಮನೆ ಒಳಗೆ ಹೋಗಿ ಮುಖ ತೊಳೆದು ಬಂದು ಟೀ ಹೀರುತ್ತಾ ಕುಳಿತರು. ಷರೀಫ್ ಮೇಷ್ಟ್ರು ಅಂದು ನಡೆದ ಇಡೀ ಘಟನೆಯನ್ನು ಮತ್ತೆ ಮೆಲುಕು ಹಾಕಿದರು. ಇಬ್ಬರು ಜೀವಬಿಟ್ಟಾಗಲೇ, ವಾರ್ಡ್ ಬಾಯ್ ಮೂಲಕ ಸ್ಟೇಷನ್ನಿಗೆ ಮಾಹಿತಿ ಕಳುಹಿಸಿದ್ದು. ಜೊತೆಗೆ, "ಅರ್ಜೆಂಟ್ ಪ್ಲೀಸ್ ಕಂ ವಿಥ್ ಪೀಸೀಸ್" ಎಂದು ಸಬ್ ಇನ್‌ಸ್ಪೆಕ್ಟರಿಗೆ ಒಂದು ಚೀಟಿ ಬರೆದು ಕಳುಹಿಸಿದ್ದೂ ಎಲ್ಲವನ್ನೂ ವಿವರವಾಗಿ ಮೇಷ್ಟ್ರು ಹೇಳಿದರು. "ನೋಡು ರಾಘವ, ಸಾವು ಎಲ್ಲರಿಗೂ ಆಘಾತಕಾರಿ ವಿಷಯವೇ. ಅದರಲ್ಲೂ ಜನರು ಹೆಚ್ಚು ಸೇರಿದ್ದಾಗ ಇನ್ನೂ ಡೇಂಜರಸ್. ಇಂತಹ ಸಂದರ್ಭದಲ್ಲಿ ನಾವು ಬಹಳ ಹುಷಾರಾಗಿರಬೇಕು. ಹೆದರಿಕೆಯಿಂದಲ್ಲ, ಸ್ಟಾಫ್ ಮತ್ತು ಉಳಿದ ರೋಗಿಗಳ ಸೇಫ್ಟಿಯ ಕಾರಣದಿಂದ. ಇವತ್ತು ಪೊಲೀಸರು ಇರಲಿಲ್ಲ ಅಂದ್ರೆ, ನರ್ಸಿಂಗ್ ಸ್ಟಾಫ್ ಮತ್ತು ಉಳಿದ ಪೇಶೆಂಟ್‌ಗಳು ಅಪಾಯಕ್ಕೆ ಸಿಲುಕೋರು. ಮನುಷ್ಯ ಮೂಲತಃ ದುಷ್ಟ. ತಾನಷ್ಟೇ ಸತ್ಯ ಅಂತ ಯಾವಾಗಲೂ ತಿಳಿದಿರುತ್ತಾನೆ. ಅಷ್ಟೇ ಆಗಿದ್ದರೆ ತೊಂದರೆಯಿರಲಿಲ್ಲ. ತನ್ನನ್ನು ಹೊರತುಪಡಿಸಿ ಉಳಿದವರೆಲ್ಲಾ ಕೆಡುಕರು ಅಂತ ನಂಬಿರುತ್ತಾನೆ. ಎಲ್ಲರೂ ತಾವು ಮಾತ್ರ ರಾಮ, ಉಳಿದವರೆಲ್ಲಾ ರಾವಣ ಅಂತ ಕಲ್ಪಿಸಿಕೊಳ್ಳುತ್ತಾರೆ. ಹಾಗಾಗಿ ನಮ್ಮ ಸೇಫ್ಟಿಗೆ ಬೇಕಾದ ತಯಾರಿ ಮಾಡಿಕೊಳ್ಳಲೇ ಬೇಕು ಕಣಯ್ಯ" ಎಂದು ಮಾತು ಮುಗಿಸಿದ್ದರು. ಒಂದೆರಡು ಗಂಟೆ ಮುನ್ನ ನಡೆದ ಘಟನೆಯನ್ನಾಗಲೇ ಅವರು ಬಿಟ್ಟಾಗಿತ್ತು. "ರಾಘು, ಸಂಜೆ ರೌಂಡ್ಸ್ ಮುಗ್ಸಿಬಿಡೋಣ ಬಾರೋ" ಎಂದು ಆಸ್ಪತ್ರೆಗೆ ಹೊರಡಲು ಅನುವಾದರು. ಅವರನ್ನು ನೋಡುತ್ತಾ "ಸುಮ್ಮನಿರುವ ಸುಮ್ಮಾನ/ ಪದ ರಹಿತ ಬೋಧ" ಸಾಲುಗಳು ನೆನಪಾಗಿದ್ದವು ರಾಘವನ್‌ರಿಗೆ.

ಅಂದಿನಿಂದ ಆರಂಭವಾದ ಸಿಗರೇಟ್ ಸಂಬಂಧ ಇಂದಿನ ವರೆಗೂ ಮುಂದುವರೆದಿತ್ತು. ಆದರೆ, ಔಷಧಿಯಾಗಿ ಮಾತ್ರ. ಹಾಗೇ ಷರೀಫ್ ಮೇಷ್ಟ್ರ ಪಾಠವೂ ಉಳಿದುಕೊಂಡಿತ್ತು. ಇಲ್ಲದಿದ್ದರೆ ಇವತ್ತು ಮಾಡಿದ ಯಾವ ಕೆಲಸವೂ ಆಗಲು ಸಾಧ್ಯವೇ ಇರಲಿಲ್ಲ. ರಾಘವನ್‌ರಿಗೆ ಆಕ್ಸಿಜನ್ ಸಪ್ಲೈ ಸ್ಥಿತಿ ಅರ್ಥವಾಗುತ್ತಿದ್ದಂತೆ, ಏನೋ ನೆಪ ಮಾಡಿ ರಾಮಸ್ವಾಮಿಗೆ ನಿನ್ನೆಯೇ ಫೋನ್ ಮಾಡಿ,